The Average Number of Hospitals and Dispensaries per one Lakh Population in each of the Divisions of the State.

*Q.—17. Sri NEELAKANTAPPA SHARNAPPA (Jewargi) —

Will the Government be pleased to state:—

(*a*) the average number of Dispensaries and Hospitals per one lakh population in each of the Divisions of the Mysore State;

(*b*) whether it is not a fact that Gulbarga Division is very badly lacking in medical facilities;

(*c*) if so, the steps taken or proposed to be taken to improve the medical facilities during the Third Plan period in that area?

A.—Sri K. NAGAPPA ALVA (Minister for Health).—

(*a*) (i) Bangalore Division	...	4.20
(ii) Mysore Division	...	5.58
(iii) Belgaum Division	...	3.03
(iv) Gulbarga Division	...	2.38

(*b*) Yes, comparatively.

'(*c*) Nine Government of India type Primary Health Centres and Three Health Unit type Dispensaries have been sanctioned so far. Eight more Government of India type Primary Health Centres are expected to be opened. Health Unit Dispensaries will be sanctioned in blocks of 15,000 population still lacking allopathic aid, where the Taluk Boards come forward to establish and maintain them.

ಶ್ರೀಮತಿ ಬನವರಾಜೇಶ್ವರಿ.—ಸ್ವಾಮಿ, ನನ್ನ ಪ್ರಶ್ನೆಗೆ ಉತ್ತರವಾಗಿ ಇದುವರೆಗೆ ಭಾರತ ಸರ್ಕಾರದವರು ಸ್ಥಾಪಿಸುತ್ತಿರುವ ಮಾದರಿಯ ಮೂರು ಔಷಧಾಲಯಗಳನ್ನು ಮಂಜೂರು ಮಾಡಿದ್ದೀರೆಂದು ಹೇಳಿದ್ದೀರಿ, ಹಾಗಾದರೆ ನಮ್ಮ ಗುಲ್ಬರ್ಗ ಡಿವಿಜನ್ನಿನ ಮೂರು ಜಿಲ್ಲೆಗಳಲ್ಲಿ ಎಲ್ಲೆಲ್ಲಿ ಪ್ರೈಮರಿ ಹೆಲ್ತ್ ಸೆಂಟರುಗಳನ್ನು ಪ್ರಾರಂಭ ಮಾಡಿದ್ದೀರಿ?

ಶ್ರೀ ಕೆ. ನಾಗಪ್ಪ ಆಳ್ವ.—ಎಲ್ಲೆ ತೆಗೆದಿದ್ದೇವೆ ಎಂಬ ವಿಚಾರದಲ್ಲಿ ಈಗ ನನ್ನಲ್ಲಿ ಇಕ್ಷರ್ ಮೇಷನ್ ಇಲ್ಲ.

ಶ್ರೀಮತಿ ಬನವರಾಜೇಶ್ವರಿ.—ತಾಲ್ಲೂಕು ಮಂಡಲಿಗಳವರು ಆರೋಗ್ಯ ವಿಭಾಗದ ಔಷಧಾಲಯಗಳನ್ನು ಪ್ರಾರಂಭಿಸಲು ಹಾಗೂ ನಡೆಸಿಕೊಂಡು ಬರಲು ಮುಂದೆ ಬಂದಲ್ಲಿ ಅಲೋಪತಿಕ್ ವೈದ್ಯಕೀಯ ಸಹಾಯವಿಲ್ಲದೆ ಇರುವ 15,000 ಜನಸಂಖ್ಯೆಯುಳ್ಳ ಬ್ಲಾಕ್‌ಗಳಿಗೆ ಅಂಥಾ ಔಷಧಾಲಯಗಳನ್ನು ಮಂಜೂರು ಮಾಡಲಾಗುವುದು ಎಂದು ಹೇಳಿದ್ದೀರಿ, ಈ ಪ್ರಕಾರ ಈಗ ಕೊಟ್ಟಿರುವ ಪ್ರೈಮರಿ ಸೆಂಟರುಗಳಲ್ಲದೆ ಮತ್ತೆ ಎಷ್ಟು ಡಿಸ್‌ಪೆನ್ಸರಿಗಳನ್ನು ನಮ್ಮ ಗುಲ್ಬರ್ಗ ಡಿವಿಜನ್ನಿಗೆ ಕೊಡಬೇಕಾಗುತ್ತದೆ?

ಶ್ರೀ ಕೆ. ನಾಗಪ್ಪ ಆಳ್ವ.—ಆ ಡಿವಿಜನ್ನಿಗೆ ಒಟ್ಟು 167 ಹೆಲ್ತ್ ಯೂನಿಟ್‌ಗಳನ್ನು ಕೊಡಬೇಕಾಗಿದೆ. ಆಪ್ಪೈಕಿ 15 ಸಾವಿರ ಜನಸಂಖ್ಯೆ ಇರತಕ್ಕಂಥ ಬ್ಲಾಕಿಗೆ ಒಂದೊಂದು ಹೆಲ್ತ್ ಯೂನಿಟ್‌ನಂತೆ ಈಗಾಗಲೇ ಅಲ್ಲಿಗೆ 56 ಹೆಲ್ತ್ ಯೂನಿಟ್‌ಗಳನ್ನು ಕೊಟ್ಟಿದೆ. ಇನ್ನು 111 ಹೆಲ್ತ್ ಯೂನಿಟ್‌ಗಳನ್ನು ಕೊಡಬೇಕಾಗಿದೆ. ಅದರ ಪೈಕಿ 50 ಯೂನಿಟ್‌ಗಳನ್ನು ವರ್ಷದ ವಾರ್ಷಿಕ ಯೋಜನೆಯಲ್ಲಿ ಕೊಡಲಾಗುತ್ತದೆ.

ಶ್ರೀಮತಿ ಬನವರಾಜೇಶ್ವರಿ.—ಭಾರತ ಸರ್ಕಾರದವರು ಸ್ಥಾಪಿಸುತ್ತಿರುವ ಮಾದರಿಯ ಹೆಚ್ಚಿನ ಎಂಟು ಪ್ರಾಥಮಿಕ ಆರೋಗ್ಯ ಕೇಂದ್ರ ತೆರೆಯಬಹುದೆಂದು ನಿರೀಕ್ಷಿಸಲಾಗಿದೆ ಎಂದು ಹೇಳಿದ್ದೀರಿ, ಅವುಗಳನ್ನು ತೆರೆಯಲು ಕೇಂದ್ರ ಸರ್ಕಾರದ ಮಂಜೂರಾತಿ ಬಂದಿಲ್ಲವೇ, ಅಥವಾ ಪಬ್ಲಿಕ್ ಕಾಂಟ್ರಿಬ್ಯೂಷನ್ ಬಂದಿಲ್ಲವೇ? ಯಾವ ನೆಲುವಾಗಿ ಅವುಗಳನ್ನು ತೆರೆಯದೆ ಇಲ್ಲಿಯವರೆಗೂ ತಟಸ್ಥವಾಗಿ ನಿಂತಿದೆ?

ಶ್ರೀ ಕೆ. ನಾಗಪ್ಪ ಆಳ್ವ.— ಅಲ್ಲಿ ಪಬ್ಲಿಕ್ ಕಾಂಟ್ರಿಬ್ಯೂಷನ್ನೂ ಬರಬೇಕು, ಮತ್ತು ತಾಲ್ಲೂಕು ಬೋರ್ಡಿನ ರೆಸಲ್ಯೂಷನ್ ಆಗಬೇಕು. ಅವೆಲ್ಲವೂ ಆದಮೇಲೆ ಪ್ರತಿಯೊಂದಕ್ಕೂ ಮುಂಜೂರಾತಿಯನ್ನು ಕೊಡುತ್ತೇವೆ.

ಶ್ರೀ ಸಿ. ಎಸ್. ಹುಲ್ಕೋಟಿ.— ಹದಿನೈದು ಸಾವಿರ ಜನ ಸಂಖ್ಯೆ ಇರುವ ಬ್ಲಾಕಿಗೆ ಒಂದು ಔಷಧಾಲಯವನ್ನು ಕೊಡುತ್ತೇವೆಂದು ಹೇಳಿದ್ದೀರಿ, ಆ ಪ್ರಕಾರ ನಮ್ಮ ಧಾರ್ವಾಡ ಜಿಲ್ಲೆಗೆ ಎಷ್ಟು ಔಷಧಾಲಯಗಳನ್ನು ಕೊಡುತ್ತೀರಿ ?

Sri K. NAGAPPA ALVA.—This is beyond the purview of this question.

ಶ್ರೀ ಸಿ. ಎಸ್. ಹುಲ್ಕೋಟಿ.—ಆ ಪ್ರಕಾರ ಬೆಳಗಾಂ ಡಿವಿಜನ್ನಿಗೆ ಎಷ್ಟು ಔಷಧಾಲಯಗಳನ್ನು ಕೊಡಬೇಕಾಗುತ್ತದೆ ?

ಶ್ರೀ ಕೆ. ನಾಗಪ್ಪ ಆಳ್ವ.—ಈಗ ಮುಖ್ಯವಾಗಿ ಪ್ರಶ್ನೆ ಬಂದಿರುವುದು ಗುಲ್ಬರ್ಗ ಡಿವಿಜನ್ನಿಗೆ ಸಂಬಂಧಪಟ್ಟದ್ದು. ಆದ್ದರಿಂದ ಈಗ ಅದಕ್ಕೆ ಸಂಬಂಧಪಟ್ಟ ವಿವರಗಳು ಮಾತ್ರ ನನ್ನಲ್ಲಿ ಇವೆ. ಬಾಕಿ ಡಿವಿಜನ್ನಿನ ವಿವರಗಳು ಇಲ್ಲ.

ಶ್ರೀ ವೀರಭದ್ರಪ್ಪ ಈರಪ್ಪ.—ರಾಯಚೂರು ಜಿಲ್ಲೆಗೆ ಎಷ್ಟು ಕೊಡಬೇಕಾಗುತ್ತದೆ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಕೆ. ನಾಗಪ್ಪ ಆಳ್ವ.—ರಾಯಚೂರು ಜಿಲ್ಲೆಗೆ ಸಂಬಂಧಪಟ್ಟದ್ದು ಪ್ರತ್ಯೇಕವಾಗಿಲ್ಲ. ಗುಲ್ಬರ್ಗ ಡಿವಿಜನ್ನಿಗೆ ಸಂಬಂಧಪಟ್ಟ 3 ಜಿಲ್ಲೆಗಳ ಒಟ್ಟು ಅಂಕಿ ಅಂಶಗಳು ಇವೆ.

ಶ್ರೀ ನೀಲಕಂಠಪ್ಪ ಶರಣಪ್ಪ.—ನಮ್ಮ ಜಿಲ್ಲೆಯಲ್ಲಿ ಕೆಲವು ಕಡೆ ಹೆಲ್ತ್ ಯೂನಿಟ್‌ಗಳಲ್ಲಿ ಡಾಕ್ಟರುಗಳು ಇಲ್ಲ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ನಾಗಪ್ಪ ಆಳ್ವ.—ಕೆಲವು ಕಡೆಗಳಲ್ಲಿ ಇಲ್ಲ ಎಂಬುದು ಗೊತ್ತಿದೆ.

ಶ್ರೀ ನೀಲಕಂಠಪ್ಪ ಶರಣಪ್ಪ.—ಅದನ್ನು ಪೂರೈಸಲು ಏನಾದರೂ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೀರಾ ?

ಶ್ರೀ ಕೆ. ನಾಗಪ್ಪ ಆಳ್ವ.—ತೆಗೆದುಕೊಂಡಿದ್ದೇವೆ.

ಶ್ರೀಮತಿ ಬನವರಾಜೇಶ್ವರಿ.—ಕಂಪ್ಯಾರೆಟೀವ್ ಸ್ಟೇಟ್‌ಮೆಂಟಿನಲ್ಲಿ ಗುಲ್ಬರ್ಗ ಡಿವಿಜನ್ನಲ್ಲಿ ಪ್ರತಿ ಒಂದು ಲಕ್ಷ ಜನ ಸಂಖ್ಯೆಗೂ ಇರುವ ಔಷಧಾಲಯಗಳ ಮತ್ತು ಆಸ್ಪತ್ರೆಗಳ ಸರಾಸರಿ ಸಂಖ್ಯೆ 2.38 ಎಂದು ಕೊಟ್ಟಿದ್ದೀರಿ. ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ನಮಗೆ ಬರಬೇಕಾದ ಡಿಸ್‌ಪೆನ್ಸರಿ ಕೋಟಾವನ್ನೆಲ್ಲಾ ಕೊಟ್ಟು ಆರೋಗ್ಯ ದೃಷ್ಟಿಯಲ್ಲಿ ನಮ್ಮ ಡಿವಿಜನ್‌ನಲ್ಲಿ ಸರಿಯಾದ ವ್ಯವಸ್ಥೆ ಮಾಡುವುದಕ್ಕೆ ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೀರಿ ಎನ್ನುವುದಕ್ಕೆ ಭರವಸೆಯನ್ನು ಕೊಡುತ್ತೀರಾ ?

ಶ್ರೀ ಕೆ. ನಾಗಪ್ಪ ಆಳ್ವ.—ಆ ವಿಷಯದಲ್ಲಿ ಭರವಸೆಯನ್ನು ಕೊಡುತ್ತೇನೆ. ಈಗ ಸರ್ಕಾರದವರು ಔಷಧಾಲಯಗಳನ್ನು ಮತ್ತು ಆಸ್ಪತ್ರೆಗಳನ್ನು ಕೊಡುವುದರಲ್ಲಿ ಏನೊಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆಯೋ ಅದರ ಪ್ರಕಾರ ಎಲ್ಲಾ ತರಹ ಡಿಸ್‌ಪೆನ್ಸರಿಗಳನ್ನೂ ಕೊಡುತ್ತೇವೆ.

ಶ್ರೀ ನೀಲಕಂಠಪ್ಪ ಶರಣಪ್ಪ.—ಗುಲ್ಬರ್ಗ ಆಸ್ಪತ್ರೆಯಲ್ಲಿ ಸ್ಥಳದ ಅಭಾವ ಇವೆ, ಅದನ್ನು ವಿಸ್ತರಿಸಲು ಕಾರ್ಯಕ್ರಮ ತೆಗೆದುಕೊಂಡಿದ್ದೀರಾ ?

ಶ್ರೀ ಕೆ. ನಾಗಪ್ಪ ಆಳ್ವ.—ಅದು ಸರ್ಕಾರದ ಗಮನದಲ್ಲಿದೆ.

Smt. VIJAYA DEVI RAGHAVENDRA RAO DESAI.—Has any Taluk Board come forward to establish and maintain any health unit or dispensary pertaining to Gulburga Division ?

Sri K. NAGAPPA ALVA.—Yes, certain Taluk Boards have come forward.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಇಷ್ಟು ಜನ ಸಂಖ್ಯೆ ಇದ್ದರೆ ಇಷ್ಟು ಆಸ್ಪತ್ರೆ ಇರಬೇಕೆಂದು ಒಂದು ಐಯಾಂ ಆದ ನಿಗದಿ ಇದೆಯೇ ?

ಶ್ರೀ ಕೆ. ನಾಗಪ್ಪ ಆಳ್ವ.—ಆ ತರಹ ಒಂದು ಯೋಜನೆ ಸರ್ಕಾರದ ಮುಂದೆ ಇದೆ.

ಶ್ರೀಮತಿ ಬನವರಾಜೇಶ್ವರಿ.—ನಮ್ಮ ಡಿವಿಜನ್ನಿಗೆ ಯುನಾನಿ ಮತ್ತು ಅಲೋಪತಿಕ್ ಡಿಸ್‌ಪೆನ್ಸರಿಗಳನ್ನು ಕೊಟ್ಟಿದ್ದೇವೆಂದು ಹೇಳಿದ್ದೀರಿ, ಅಂಥಾ ಡಿಸ್‌ಪೆನ್ಸರಿಗಳು ಮೂರು ಜಿಲ್ಲೆಗಳಲ್ಲೂ ಎಷ್ಟಿವೆ ?

ಶ್ರೀ ಕೆ. ನಾಗಪ್ಪ ಆಳ್ವ.—ಅದರ ವಿವರ ಪ್ರತ್ಯೇಕವಾಗಿ ಈಗ ನನ್ನ ಹತ್ತಿರ ಇಲ್ಲ.

———

Disposal of Trees While giving Lands for Coffee Cultivation.

*Q.—124 Smt. B. L. SUBBAMMA (Chickmagalur).—

Will the Government be pleased to state :—

(*a*) the decision they have taken with regard to the disposal of trees while giving lands for coffee cultivation ;

(*b*) whether the Planters' Association has represented regarding the hardship that would be caused to the Coffee Planters for want of shelter on account of the trees being cut by the Government themselves ?

A.— M. V. KRISHNAPPA (Minister for Revenue).—

(*a*) Instructions have been issued that malki both reserved and unreserved should be removed by the Forest Department within a year and, if it is not removed by the Forest Department, it may be sold to the party in whose favour the land is proposed to be granted.

(*b*) Yes.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಅರಣ್ಯ ಇಲಾಖೆಯವರು ಮಿಾನಲಾದ ಹಾಗೂ ಮೀನಲ್ಲದ ಅರಣ್ಯಗಳಲ್ಲಿರುವ (ಮಾಲ್ಕಿ) ಮರಗಳನ್ನು ಒಂದು ವರ್ಷದೊಳಗಾಗಿ ತೆಗೆಯಬೇಕೆಂದೂ ಹಾಗೆ ಅವರು ತೆಗೆಯದಿದ್ದಲ್ಲಿ ಜಮಿೀನನ್ನು ಯಾರಿಗೆ ಮಂಜೂರು ಮಾಡಬೇಕೆಂದು ಉದ್ದೇಶಿಸಲಾಗಿ ದೆಯೋ ಆ ವ್ಯಕ್ತಿಗೆ ಮಾರಾಟ ಮಾಡಬಹುದೆಂದು ಅನುಜ್ಞೆಗಳನ್ನು ಕೊಡಲಾಗಿದೆ ಎಂದು ಹೇಳಿ ದ್ದೀರಿ, ಅದರಲ್ಲಿ ಮಾರಾಟದ ನಿಯಮವನ್ನು ನಿರ್ಧಾರ ಮಾಡಿದ್ದೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಫಾರೆಸ್ಟ್ ಇಲಾಖೆಯವರು ಮಾಲ್ಕಿ ಬೆಲೆಯನ್ನು ಫಿಕ್ಸ್ ಮಾಡು ತ್ತಾರೆ. ಅದರ ಪ್ರಕಾರ ಜಮಿೀನನ್ನು ಯಾರಿಗೆ ಕೊಡುತ್ತಾರೆಯೋ ಅವರಿಗೇ ಅದನ್ನು ಕೊಟ್ಟು ಆಮೇಲೆ ಜಮಿೀನನ್ನು ಅವರ ಸ್ವಾಧೀನಕ್ಕೆ ಕೊಡಬೇಕಾಗುತ್ತದೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಈಗ ಆ ಮರಗಳನ್ನು ಮಾರಾಟ ಮಾಡುವುದಕ್ಕೆ ರೇಟ್ ಫಿಕ್ಸ್ ಮಾಡಿರತಕ್ಕದ್ದು ಮಾರ್ಕೆಟ್ ರೇಟೋ ಅಥವಾ ಸೀನಿಯರೇಜ್ ರೇಟೋ ?

ಶ್ರೀ ಎಂ. ವಿ. ಕೃಷ್ಣಪ್ಪ.— ಕೆಲವು ಕಡೆಗಳಲ್ಲಿ ಮಾರ್ಕೆಟ್ ರೇಟ್ ಇದೆ. ಸೀನಿಯರೇಜ್ ರೇಟ್ ಫಿಕ್ಸ್ ಮಾಡಿದರೆ ಉತ್ತಮ. ಅದನ್ನು ನೋಡಿಕೊಂಡು ಮಾಡುತ್ತೇವೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಸೀನಿಯರೇಜ್ ರೇಟಿಗೂ ಮಾರ್ಕೆಟ್ ರೇಟಿಗೂ ಬಹಳ ವ್ಯತ್ಯಾಸವಾಗಿ ಇರಾಜೆಗೆ ನಷ್ಟವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅದಕ್ಕೋಸ್ಕರ ಜಮಿೀನು ಕೊಡಬೇಕಾದರೆ ಮರ ಇಲ್ಲದೆ ಇರುವ ಕಡೆ ನೋಡಿ ಕೊಡಬೇಕೆಂದು ಅಧಿಕಾರಿಗಳಿಗೆ ತಿಳಿಸಿದ್ದೇವೆ. ಮರಗಳು ಇರುವ ಪ್ರದೇಶವನ್ನು ಕೊಟ್ಟರೆ ತೊಂದರೆಗೆ ಕಾರಣವಾಗುತ್ತದೆ. ಕೆಲವು ಕಡೆ ಒಳ್ಳೆಯ ಬೆಲೆ ಇರುವ ಮರಗಳನ್ನು ಸುಲಭವಾದ ಬೆಲೆಗೆ ಕೊಂಡುಕೊಂಡು ಅವರು ಆ ಮರಗಳನ್ನು ಕಡಿದು ಹಣ ಸಂಪಾದನೆ ಮಾಡು ತ್ತಾರೆ. ಆದರೆ ಪೂರ್ತಿ ಜಮಿೀನಿಗೆ ಕಾಫಿಯನ್ನು ಹಾಕುವುದಿಲ್ಲ. ಆದ್ದರಿಂದ ಮರಗಳನ್ನು ಕಡಿದು ಕಾಫಿ ತೋಟವನ್ನು ಮಾಡುತ್ತಾರೆಯೇ ಅಥವಾ ಮಾಡುವುದಿಲ್ಲವೇ ಎಂಬುದನ್ನು ನೋಡಿಕೊಂಡು ಸ್ವಲ್ಪ ಹುಷಾರಾಗಿ ಕೊಡಬೇಕು ಮತ್ತು ನಿರ್ಬಂಧ ಹಾಕಿ ಕೊಡಬೇಕೆಂದು ಅದನ್ನು ನಿಧಾನ ಮಾಡುತ್ತಿದ್ದೇವೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಸರ್ಕಾರದ ಆಜ್ಞೆಪ್ರಕಾರ ಮರಗಳನ್ನು ಕಡಿಯುತ್ತಾ ಬಂದರೆ ಕಾಫಿ ಬೆಳೆ ಚೆನ್ನಾಗಿ ಆಗುವುದಿಲ್ಲ. ಈ ಆಜ್ಞೆಯನ್ನು ಪುನಃ ವಿಮರ್ಶೆ ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಪ್ಲಾಂಟರುಗಳೂ ಈ ವಿಚಾರದಲ್ಲಿ ಬರೆದಿದ್ದಾರೆ. ಪ್ಲಾಂಟರ್ಸ್ ಅಸೋಷಿಯೇಷನ್ನಿನವರೂ ಕಾಫಿ ಬೆಳೆ ಮಾಡಬೇಕಾದರೆ, ಮಾರದ ನೆರಳು ಬೇಕು. ಎಲ್ಲಾ ಮರ ಗಳನ್ನು ಕಡಿದರೆ ಪ್ಲಾಂಟೇಷನ್ ಕ್ರಾಪುಗಳಿಗೆ ತೊಂದರೆಯಾಗುತ್ತೆಂದು ತಿಳಿಸಿದ್ದಾರೆ. ಆದರೆ ಇದರಲ್ಲಿ ಕೆಲವು ಕಡೆ ಮೋಸ ನಡೆದಿದೆ. ಕೆಲವರುಗಳು ಮರಗಳನ್ನು ಕಡಿದು ಮಾರಿಕೊಳ್ಳುವ ಸಂದರ್ಭ ಇದೆ. ಆದ್ದರಿಂದ ನಿಧಾನವಾಗಿ, ಹುಷಾರಿನಿಂದ ಹೋಗಬೇಕು.

ಶ್ರೀಮತಿ ಬಿ. ಎಲ್. ನುಬ್ಬಮ್ಮ.—ಎಲ್ಲಾ ಮರಗಳನ್ನು ಒಂದೇ ವರ್ಷ ಕಡಿದರೆ ಕಾಫಿ ವ್ಯವಸಾಯಕ್ಕೆ ತೊಂದರೆಯಾಗುವುದರಿಂದ ವರ್ಷ ವರ್ಷಕ್ಕೂ 5-10 ಎಕರೆಯಂತೆ ಆಜ್ಞೆಯನ್ನು ಜಾರಿಗೆ ಕೊಡುವುದು ಒಳ್ಳೆಯದಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ತಾವು ಮಲೆನಾಡಿನವರು, ತಮಗೆ ಮಲೆನಾಡಿನ ಅನುಭವವಿದೆ. ತಾವು ಅಸೆಂಬ್ಲಿ ಮತ್ತು ಕೌನ್ಸಿಲ್ ಮೆಂಬರುಗಳು ಸಲಹೆ ಕೊಡುವುದನ್ನೇ ನಾವು ಮಾನ್ಯತೆ ಕೊಡುವುದಕ್ಕೆ ಸಿದ್ಧರಿದ್ದೇವೆ. ಸ್ಥಳದಲ್ಲಿರುವವರು ತಮಗೆ ವಿಷಯ ಚೆನ್ನಾಗಿ ಗೊತ್ತಿದೆ. ಬೇಕಾದರೆ ಮಲೆನಾಡಿನಿಂದ ಬಂದಿರುವ ಅಸೆಂಬ್ಲಿ ಮತ್ತು ಕೌನ್ಸಿಲ್ ಮೆಂಬರುಗಳ ಮೀಟಿಂಗ್ ಮಾಡಿ, ತಮ್ಮ ಅನುಭವ, ಸಲಹೆಗಳನ್ನು ಕೇಳಿ, ತಾವು ಕಾನೂನು ತಿದ್ದುಪಡಿ ಮಾಡಬೇಕೆಂದು ನಿರ್ಣಯಿಸಿದರೆ, ನಾನು ಸಿದ್ಧನಿದ್ದೇನೆ.

ಶ್ರೀ ಬಿ. ಚನ್ನಬೈರೇಗೌಡ.—ಮರಗಳನ್ನು ಕಡಿಯ ಬೇಕಾದಂಥ ಸಂಧರ್ಭಗಳು ಎನ್ನು ?

ಶ್ರೀ ಎಂ. ವಿ. ಕೃಷ್ಣಪ್ಪ.—ಬೇರೆ ಪ್ರಶ್ನೆ ಕೇಳಿದರೆ, ವಿವರಗಳನ್ನು ಕೊಡುತ್ತೇನೆ.

ಶ್ರೀ ಬಿ. ಚನ್ನಬೈರೇಗೌಡ.—ಇದರಲ್ಲ ಬರುವುದಿಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಇಲ್ಲ.

———

Constitution of a Committee for preparing Text Books for Primary, Middle and High Schools in the State.

*Q—.209. Sri E. NARAYANA GOWDA (Bangarpet).—

Will the Government be pleased to state :—

(*a*) when the Committee for the purpose of preparing text books for Primary, Middle and High Schools in the State was constituted by the Education Dapartment and the names of the members of the Committee ;

(*b*) whether they have prescribed different text books for each District in the State and if so, the reasons for the same ;

(*c*) the names of the books that have not been published so far and the reasons therefor ?

A.—Sri S. R. KANTHI (Minister for Education).—

(*a*) The member probably means the committees for prescribing Text Books and not committee for preparing Text Books. The committees for prescribing Taxt Books were constituted on 18th March 1960.

The names of the members of the two committees are as follows :—

I. TEXT BOOK COMMITTEE FOR PRIMARY AND BASIC SCHOOLS.

1. Director of Public Instruction in Mysore, Bangalore—*Chairman.*
2. Sri T. Vasudevaiah, Joint Director of Public Instruction.
3. Sri G. P. Shivaram, Joint Director of Public Instruction.
4. Deputy Director of Public Instruction, Education Research Bureau, Bangalore—*Secretary.*
5. Sri B. Mariraj, Deputy Director of public Instruction, Bangalore Division, Bangalore